# ಸ್ವಾಮಿ ವಿವೇಕಾನಂದರು ಮತ್ತು ಸಮಕಾಲೀನ ಪಾಶ್ಚಾತ್ಯ ವಿಜ್ಞಾನಿಗಳು


ಡಾ. ಎನ್.ಬಿ. ದೇಸಾಯಿ

ಸ್ವಾಮಿ ವಿವೇಕಾನಂದರ ಒಂದು ಅಪೂರ್ವ ಕೊಡುಗೆಯೆಂದರೆ ವೇದಾಂತ ಸಿದ್ಧಾಂತಗಳನ್ನು ಆಧುನಿಕ ವೈಜ್ಞಾನಿಕ ಭಾವನೆಗಳೊಂದಿಗೆ ಸಾಮರಸ್ಯಗೊಳಿಸಿದುದು. ಅವರಿಗೆ ತಿಳಿದಿದ್ದ ಕೆಲವು ಪ್ರಮುಖ ವಿಜ್ಞಾನಿಗಳ ಸಂಕ್ಷಿಪ್ತ ಪರಿಚಯ ಈ ಲೇಖನದಲ್ಲಿದೆ. ಲೇಖಕರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿರುವರು.

೧೮೯೩ರಲ್ಲಿ ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ನಡೆದ ಸರ್ವಧರ್ಮಸಮ್ಮೇಳದಲ್ಲಿ ಭಾಗವಹಿಸಿ ವಿಖ್ಯಾತರಾದ ನಂತರ ಸನಾತನಧರ್ಮದ, ಮುಖ್ಯವಾಗಿ ವೇದಾಂತ ತತ್ತ್ವದ ಪ್ರಚಾರಕ್ಕಾಗಿ ಅಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ಉಳಿದುಕೊಂಡರು. ಈ ಅವಧಿಯಲ್ಲಿ ಸ್ವಭಾವತಃ ಜ್ಞಾನ ಕುತೂಹಲಿಗಳಾದ ಸ್ವಾಮೀಜಿ ಹಲವಾರು ಪಾಶ್ಚಾತ್ಯ ವಿಜ್ಞಾನಿಗಳನ್ನು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಂಡರು. ಏಕೆಂದರೆ ಸ್ವಾಮೀಜಿಗೆ ಯಾವ ವಿದ್ಯೆಯೂ ವರ್ಜ್ಯವಲ್ಲ. ಯಾವುದೇ ವಿದ್ಯೆಯಾಗಲಿ, ಅದು ನಮ್ಮ ಲೌಕಿಕ ಹಾಗೂ ಆಧ್ಯಾತ್ಮಿಕ ಉನ್ನತಿಗೆ ಅನುಕೂಲಕರವಾದರೆ ಅದರ ಅಧ್ಯಯನ ಹಾಗೂ ತಿಳುವಳಿಕೆ ನಮಗೆ ಶ್ರೇಯಸ್ಕರ. ಆ ವಿದ್ಯೆಯು ವೇದಾಂತದ ತತ್ತ್ವಗಳಿಗೆ ಎಷ್ಟರಮಟ್ಟಿಗೆ ಸ್ಪಂದಿಸುತ್ತದೆ ಎಂಬುದನ್ನು ಅರಿಯುವುದರಲ್ಲಿ ಸ್ವಾಮೀಜಿ ಅಗ್ರಗಣ್ಯರು. ಸ್ವಾಮೀಜಿಯಂತಹ ಬ್ರಹ್ಮಜ್ಞಾನಿಗಳಿಗೆ ಯಾವ ವಿದ್ಯೆಯೂ ಹೊಸದಲ್ಲ; ತಿಳಿದುಕೊಳ್ಳಬೇಕಾದ ವಿದ್ಯೆಯ ಬಗ್ಗೆ ಅವರು ಒಮ್ಮೆ ಕಣ್ಣುಹಾಯಿಸಿದರೆ ಸಾಕು, ಅದರ ವಿವರ ಮತ್ತು ಉದ್ದೇಶ ಒಮ್ಮೆಲೇ ಗೋಚರವಾಗುತ್ತಿತ್ತು.

೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನವು ಆಧ್ಯಾತ್ಮಿಕ ದೃಷ್ಟಿಯಿಂದ ಮಹತ್ವದ ಘಟನೆಯಾದರೂ, ಅದರ ಜೊತೆಗೆ ನಡೆದ "*Columbian Exposition*" ಎಂಬ ವಿಜ್ಞಾನಮೇಳವು ಸಹ ಜನರನ್ನು ಆಕರ್ಷಿಸಿತ್ತು. ಆಗ ಅಮೇರಿಕದಲ್ಲಿ ವಿಜ್ಞಾನವು ಬೆಳೆದು ವಿಜೃಂಭಿಸುತ್ತಿತ್ತು. ವಿದ್ಯುತ್‌ಚಾಲಿತ ಮುದ್ರಣಯಂತ್ರ (*Electrical Printer*), ಎ.ಸಿ. ಡೈನಮೋ (*A.C. Dynamo*) ಇತ್ಯಾದಿಗಳ ಆವಿಷ್ಕಾರವಾಗಿತ್ತು. ವಿಜ್ಞಾನಮೇಳದ ಉದ್ದೇಶವೂ "ಜಗತ್ತಿನ ಧರ್ಮಗಳನ್ನು ವಿಜ್ಞಾನದ ದೃಷ್ಟಿಯಿಂದ ಚಿಂತನ-ಮಂಥನ ಮಾಡುವುದು" ಎಂಬುದಾಗಿತ್ತು. ಈ ಮೇಳದಲ್ಲಿ ಸ್ವಾಮೀಜಿ, ಭಾರತೀಯ ಧರ್ಮಗಳ ಬಗ್ಗೆ, ಅದರ ಇತಿಹಾಸ, ಆಧ್ಯಾತ್ಮಿಕ ಚಿಂತನೆ ಇವುಗಳನ್ನು ಕುರಿತು ವಿಚಾರಾತ್ಮಕವಾದ ಉಪನ್ಯಾಸಗಳನ್ನು ನೀಡಿದರು.

ಈಗಿನಿಂದ ಸ್ವಾಮೀಜಿಯವರು ಜಗತ್ತಿನ ಅನೇಕ ಶ್ರೇಷ್ಠ ವಿಜ್ಞಾನಿಗಳನ್ನು ಭೇಟಿ ಮಾಡಿ ಅವರೊಡನೆ ವಿಚಾರ ವಿನಿಮಯ ನಡೆಸುವುದು ಆರಂಭವಾಯಿತು. ನಾವೀಗ ಅಂತಹ ಕೆಲವು ವಿಜ್ಞಾನಿಗಳ ಪರಿಚಯ ಮಾಡಿಕೊಳ್ಳೋಣ.



**ಲಾರ್ಡ್ ಕೆಲ್ವಿನ್** (೧೮೨೪-೧೯೦೭) : ಕೆಲ್ವಿನ್ ಅಥವಾ (ವಿಲಿಯಂ ಥಾಮ್ಸನ್)ರವರನ್ನು, ಇಂಜಿನಿಯರಿಂಗ್ ಹಾಗೂ ಭೌತಶಾಸ್ತ್ರದಲ್ಲಿ ಮಾಡಿದ ಕಾರ್ಯಕ್ಕಾಗಿ "ಲಾರ್ಡ್ ಕೆಲ್ವಿನ್" ಎಂದು ಗೌರವಿಸಲಾಯಿತು. ಆಧುನಿಕ ಭೌತಶಾಸ್ತ್ರದ ಅಡಿಪಾಯಕ್ಕೆ ಕಾರಣಕರ್ತರಾದ ಕೆಲವೇ ಕೆಲವು ಪ್ರಮುಖ ಬ್ರಿಟಿಷ್ ವಿಜ್ಞಾನಿಗಳಲ್ಲಿ ಇವರೂ ಒಬ್ಬರು.

ಇವರ ಕೊಡುಗೆಗಳು : ಶಕ್ತಿ ಸಂರಕ್ಷಣಾ ತತ್ತ್ವ (*Law of Conservation of Energy*), ವಿದ್ಯುತ್‌ಶಕ್ತಿ ಮತ್ತು ಅಯಸ್ಕಾಂತೀಯಗಳ ವಿಶ್ಲೇಷಣೆ (*Analysis of Electricity and Magnetism*), ಭೂಮಿಯ ಭೌಗೋಳಿಕ ಆಯಸ್ಸಿನ ನಿರ್ಣಯ (*Geographical Determination of Age of Earth*) ಇತ್ಯಾದಿ. ಇವರ ಜಲಾಂತರ್ಗಾಮೀಯ ಟೆಲಿಗ್ರಾಫಿಕ್ ಕೇಬಲ್ ಮೇಲಿನ ಸಂಶೋಧನೆಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟನ್‌ಗೆ ವಿಶ್ವಸಂಪರ್ಕದಲ್ಲಿ ಶ್ರೇಷ್ಠತಮ ಸ್ಥಾನವನ್ನು ದೊರಕಿಸಲು ನೆರವಾದವು. ಅವರ ಕಾಲದ ವೈಜ್ಞಾನಿಕ ವಿಚಾರದಲ್ಲಿ ಇವರ ಪ್ರಭಾವ ಅಗಾಧವಾಗಿತ್ತು.

ಜಗತ್ತಿನ ಪ್ರಮುಖ ವಿಶ್ವವಿದ್ಯಾಲಯಗಳಿಂದ ಇವರು ಗೌರವ ಪದವಿಗಳನ್ನು ಪಡೆದರು. ಇಂಜಿನಿಯರಿಂಗ್ ಹಾಗೂ ವೈಜ್ಞಾನಿಕ ಸಂಸ್ಥೆಗಳು ಇವರನ್ನು ಶ್ಲಾಘಿಸಿದವು. ೧೮೫೧ರಲ್ಲಿ ರಾಯಲ್ ಸೊಸೈಟಿಯ ಸದಸ್ಯರಾದ ಇವರು ೧೮೬೦ರಿಂದ ೧೮೯೫ರವರೆಗೆ ಅವರ ಅಧ್ಯಕ್ಷರಾಗಿದ್ದರು, ಹಾಗೂ ೧೯೦೭ರಲ್ಲಿ ನಿಧನರಾದರು. (Encyclopaedia Britanica, Vol. 10, 1970).




ಪ್ರೊಫೆಸರ್ ವಾನ್ ಹೆಲ್ಮೋಟ್ಸ್ (೧೮೨೧-೧೮೯೪)

ಹತ್ತೊಂಬತ್ತನೆ ಶತಮಾನದ ಶ್ರೇಷ್ಠ ವಿಜ್ಞಾನಿಗಳಲ್ಲಿ ಇವರೊಬ್ಬರು. ಶರೀರಶಾಸ್ತ್ರ, ಗಣಿತ, ಉಲ್ಕಾ ಶಾಸ್ತ್ರ (Meteorology) ಮುಂತಾದ ಶಾಸ್ತ್ರಗಳಿಗೆ ಇವರ ಕೊಡುಗೆ ಅಗಾಧವಾದವುಗಳು. ಆದರೆ "ಶಕ್ತಿ ಸಂರಕ್ಷಣೆಯ ಸಿದ್ಧಾಂತ" (Law of Conservation of Energy)ದ ತಮ್ಮ ಹೇಳಿಕೆಗಾಗಿ ಪ್ರಖ್ಯಾತರಾಗಿದ್ದಾರೆ. ಹತ್ತೊಂಬತ್ತನೇ ಶತಮಾನದ ಬಹುಮಟ್ಟಿನ ವಿಜ್ಞಾನ ಈ ವಿಜ್ಞಾನಿಯ ಅನೇಕ ಸಿದ್ಧಾಂತಗಳ ಮೇಲೆ ನಿಂತಿದೆ.

ಇವರ ತಂದೆಯು ಇವರನ್ನು ಆ ಕಾಲದ ಹೆಗೆಲಿಯನ್ನರ "ಸಹಜ ತತ್ವಶಾಸ್ತ್ರ" (Natural Philosophy)ದ ಅಧ್ಯಯನಕ್ಕೆ ತೊಡಗಿಸಿದರು. ಹೆಲ್ಮೋಟ್ಸ್‌ರವರ ವಿದ್ಯುತ್ ಶಕ್ತಿ ಮತ್ತು ಅಯಸ್ಕಾಂತದ ಮೇಲಿನ ಕಾರ್ಯಗಳು "ಯಂತ್ರಶಾಸ್ತ್ರ" (Classical Mechanics) ವೇ ವಿಜ್ಞಾನದ ತರ್ಕಕ್ಕೆ ಉತ್ತಮವಾದದ್ದು ಎಂಬ ಸಿದ್ಧಾಂತವನ್ನು ಹೊರಗೆಡಹುತ್ತದೆ. ಶಬ್ದ ಮತ್ತು ಸಂಗೀತದ ಮೇಲಿನ ಇವರ ಹಿಂದಿನ ಸಂಶೋಧನೆಗಳು, ಇವರನ್ನು ತರಂಗ ಚಲನೆಯ (Wave Motion) ಅಧ್ಯಯನಕ್ಕೆ ಮುನ್ನಡೆಸಿತು. ಶಕ್ತಿ-ಸಂರಕ್ಷಣೆ ತತ್ವದ ಮೇಲಿನ ಇವರ ಕಾರ್ಯವು, ಶಕ್ತಿ-ವರ್ಗಾವಣೆ(Transfer of Energy)ಯ ಸಮಸ್ಯೆಗಳ ಬಗ್ಗೆ ಇವರನ್ನು ಚಿರಪರಿಚಿತರನ್ನಾಗಿ ಮಾಡಿದವು. ಈ ಎರಡೂ ಕ್ಷೇತ್ರಗಳು ಇವರ ಮುಂದಿನ ವರ್ಷಗಳಲ್ಲಿ ಉಲ್ಕಾಶಾಸ್ತ್ರದಲ್ಲಿ ಒಂದಾದವು. ಯಂತ್ರ-ಶಾಸ್ತ್ರದ ಪ್ರಗತಿಯಲ್ಲಿ ಇವರು ಕೊನೆಯ ಪೀಳಿಗೆಯವರಾಗಿದ್ದರು.

ಜರ್ಮನಿಯ ಬರ್ಲಿನ್ನಿನಲ್ಲಿ ಇವರು ನಿಧನರಾದಾಗ ಭೌತ ಶಾಸ್ತ್ರದ ಪ್ರಪಂಚವು ವಿಪ್ಲವಕಾರಿ ಸ್ಥಿತಿಯಲ್ಲಿತ್ತು. ಕ್ಷ-ಕಿರಣ (X-ray), ರೇಡಿಯೋ ಅಲೆಗಳ ಸಂಶೋಧನೆ ಇತ್ಯಾದಿ ಭೌತ ಶಾಸ್ತ್ರದ ಹೊಸ ಆವಿಷ್ಕಾರಗಳ ಕಾರಣದಿಂದಾಗಿ ಹೆಲ್ಮೋಟ್ಸ್‌ರ ಸಾಧನೆಗಳು ವಿಶಿಷ್ಟವಾಗಿದ್ದರೂ ಕೂಡ ಹೊಸ ತಲೆಮಾರಿಗೆ ಅಪ್ರಸ್ತುತವಾದವು. (Encyclopaedia Britanica, Vol.8, P.252)



ನಿಕೋಲ ಟೆಸ್ಲಾ (೧೮೫೬-೧೯೪೩) : ಅವಿವಾಹಿತ ಟೆಸ್ಲಾರವರು ನಿಃಸ್ವಾರ್ಥಿ, ಶಿಸ್ತಿನ ಸಿಪಾಯಿ, ಕನಸುಗಳನ್ನು ನನಸುಗೊಳಿಸುವ ಕನಸುಗಾರ, ಮುಂತಾದ ವಿಶೇಷಣಗಳಿಗೆ ಪಾತ್ರರಾದವರು. ಇವರು ಮಾಡಿದ ಸಂಶೋಧನೆಗಳೆಂದರೆ—ನೀರಿನ ಉಗಿಯಿಂದ ವಿದ್ಯುತ್ ತಯಾರಿಸುವ ಯಂತ್ರ, (Alternating Steam Current Machinery), ಟೆಸ್ಲಾ ಕಾಯಿಲ್ (Tesla Coil) ಇತ್ಯಾದಿಗಳು. ಒಟ್ಟು ೨೧೭ ಆವಿಷ್ಕಾರಗಳಿಗೆ ಹಕ್ಕುಪತ್ರ(Patent)ಗಳನ್ನು ಪಡೆದಿದ್ದರು. ೧೯೪೩ರಲ್ಲಿ ನಿಧನರಾದಾಗ, ಬಂದ ಶ್ರದ್ಧಾಂಜಲಿಗಳ ಮಹಾಪೂರದಲ್ಲಿ ಮೂವರು ನೋಬಲ್ ಪಾರಿತೋಷಕ ವಿಜೇತರು ಹೇಳಿದ ಮಾತುಗಳು ಗಮನೀಯವಾದವುಗಳು: "ಆಧುನಿಕ ತಂತ್ರ ವಿಜ್ಞಾನದ ಅಭಿವೃದ್ಧಿಗೆ ಶ್ರಮಿಸಿದ ಶ್ರೇಷ್ಠವ್ಯಕ್ತಿಗಳಲ್ಲಿ ಇವರು ಒಬ್ಬರು" (*Encyclopaedia Britanica Vol.18, P, 161*). ಆಧುನಿಕ ತಂತ್ರಜ್ಞಾನಗಳಿಗೆ ಅವರ ಕೊಡುಗೆ ಅಪಾರವಾದುದೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಅವರ ಮಹತ್ವವನ್ನು ಇತ್ತೀಚೆಗೆ ಹೆಚ್ಚು ಗುರುತಿಸಲಾಗುತ್ತಿದೆ. ಟೆಸ್ಲಾರವರ ಸಂಶೋಧನೆಳನ್ನು ಕಂಡು ವಿಜ್ಞಾನಿಗಳು ಬೆರಗಾಗುತ್ತಿದ್ದಾರೆ. ಇಂದಿಗೂ ಕೂಡ ಹೊಸ ಹೊಸ ಒಳನೋಟಗಳಿಗಾಗಿ ವಿಜ್ಞಾನಿಗಳು ಟೆಸ್ಲಾರ ಸಂಶೋಧನೆಯ ನೋಟ್ಸುಗಳನ್ನು ತಿರುವಿಹಾಕುತ್ತಾರಂತೆ. "ತನ್ನ ಕಾಲವನ್ನು ಮೀರಿದ ವ್ಯಕ್ತಿ" ಎಂದು ಅವರನ್ನು ಕರೆಯಲಾಗುತ್ತಿದೆ. ಅಂತಹ ವ್ಯಕ್ತಿಯ ಸಂಬಂಧವಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಾರೆ : "ವೇದಾಂತದ ಸಿದ್ಧಾಂತಗಳು ಎಷ್ಟು ಅದ್ಭುತವಾಗಿ ವೈಚಾರಿಕವಾದುವು ಎಂಬುದನ್ನು ನಾನು ವಿಜ್ಞಾನ ಕ್ಷೇತ್ರದ ಅತಿಶ್ರೇಷ್ಠ ವ್ಯಕ್ತಿಗಳ ಬಾಯಿಂದ ಕೇಳಿರುವೆನು. ಅವರಲ್ಲಿ ಒಬ್ಬರು ವೈಯಕ್ತಿಕವಾಗಿ ನನಗೆ ಗೊತ್ತು. ಅವರಿಗೆ ಊಟ ಮಾಡುವುದಕ್ಕೂ, ಪ್ರಯೋಗಶಾಲೆಯಿಂದ ಹೊರಗೆ ಹೋಗುವುದಕ್ಕೂ ಸಮಯವಿಲ್ಲ. ಆದರೂ ವೇದಾಂತದ ಮೇಲಿನ ನನ್ನ ಉಪನ್ಯಾಸಗಳನ್ನು ಗಂಟೆಗಟ್ಟಲೆ ಕುಳಿತು ಕೇಳುತ್ತಿದ್ದರು. ಕಾರಣ, ಅವರೇ ಹೇಳುತ್ತಿದ್ದಂತೆ, ವೇದಾಂತದ ಭಾವನೆಗಳು ತುಂಬ ವೈಜ್ಞಾನಿಕ, ಈ ಯುಗದ ಆಶೋತ್ತರಗಳೊಂದಿಗೆ ಮತ್ತು ಆಧುನಿಕ ವಿಜ್ಞಾನದ ತೀರ್ಮಾನಗಳೊಂದಿಗೆ ಅವು ತುಂಬ ಸಾಮರಸ್ಯದಿಂದಿವೆ." ವಿವೇಕಾನಂದರಿಂದ ಪ್ರಭಾವಿತರಾದ ಟೆಸ್ಲಾ ದ್ರವ್ಯ ಮತ್ತು

ಶಕ್ತಿಯ ಕುರಿತು ಹೇಳುವಾಗ ತಮ್ಮ ಕೃತಿಗಳಲ್ಲಿ ಸಂಸ್ಕೃತದ ಆಕಾಶ ಮತ್ತು ಪ್ರಾಣ ಶಬ್ದಗಳನ್ನು ಉಪಯೋಗಿಸತೊಡಗಿದರು. ಇವರು ಚಿಕಾಗೋ ಸರ್ವಧರ್ಮಸಮ್ಮೇಳನದ ಒಂದು ಅಂಗವಾದ ಎಲೆಕ್ಟ್ರಿಕ್ ಕಾಂಗ್ರೆಸ್ (*Electric Congress*) ಎಂಬ ವಿಜ್ಞಾನ ವಿಭಾಗದಲ್ಲಿ ಸ್ವಾಮೀಜಿ ಯವರ ಭಾಷಣಗಳನ್ನು ಕೇಳಿ ಪ್ರಭಾವಿತರಾದರು. ಅಲ್ಲಿ ಬಳಸಿದ ವಿದ್ಯುದಲಂಕಾರಗಳೆಲ್ಲವೂ ಟೆಸ್ಲಾರ ಸಂಶೋಧನೆಯ ಕೊಡುಗೆಯೇ ಆಗಿತ್ತು.

ಟೆಸ್ಲಾರವರು ಭಾರತೀಯ ತತ್ವಶಾಸ್ತ್ರ, ಸೃಷ್ಟಿತತ್ತ್ವ ಶಾಸ್ತ್ರ (*Cosmology*) ಮುಂತಾದ ವಿಷಯಗಳ ಬಗ್ಗೆ ಸ್ವಾಮೀಜಿಯವರೊಂದಿಗೆ ಚರ್ಚಿಸುತ್ತಿದ್ದರು. ಸ್ವಾಮೀಜಿಯವರೇ ಹೇಳಿದಂತೆ ಟೆಸ್ಲಾರವರು ವೇದಾಂತದ ಪ್ರಾಣ, ಆಕಾಶ, ಕಲ್ಪ ಮುಂತಾದವುಗಳ ಬಗ್ಗೆ ತಿಳಿದುಕೊಂಡಿದ್ದರು. ಏಕೆಂದರೆ ಟೆಸ್ಲಾರಿಗನ್ನಿಸಿದಂತೆ ಈ ತತ್ವಗಳನ್ನೇ ಆಧುನಿಕ ವಿಜ್ಞಾನ ಸ್ವೀಕರಿಸುವುದು.

ಟೆಸ್ಲಾರವರು ಹೆಚ್ಚಾಗಿ ತಮ್ಮ ಪ್ರಯೋಗ ಶಾಲೆಯನ್ನು ಬಿಟ್ಟು ಹೋಗುತ್ತಿರಲಿಲ್ಲ. ಎಷ್ಟೋ ಸಾರಿ ಅಲ್ಲಿಯೇ ಊಟ ಮಾಡುತ್ತಿದ್ದರು. ಅವರು ಸ್ವಾಮೀಜಿಯ ಭಾಷಣದ ಬಗ್ಗೆ ಹೀಗೆ ಹೇಳುತ್ತಾರೆ : "ಪಾಠಗಳು ವೈಜ್ಞಾನಿಕವಾಗಿವೆ, ಆಧುನಿಕ ಯುಗಕ್ಕೆ ಬೇಕಾದ ರೀತಿಯಲ್ಲಿವೆ ಹಾಗೂ ವಿಜ್ಞಾನದ ಹೊಸ ಸಂಶೋಧನೆಗಳಿಗೆ ಒಂದಕ್ಕೊಂದು ಹೊಂದಾಣಿಕೆಯಾಗುವವು." ಈ ವಿಜ್ಞಾನಿಯ ಪ್ರಯೋಗ ಶಾಲೆ ಚಿಕಾಗೋದಲ್ಲಿ ಪಶ್ಚಿಮ ಕಡೆಗಿನ ರಸ್ತೆಯ ೪೫ ನಂಬರಿನ ಮನೆಯಲ್ಲಿ ಇತ್ತು. ೧೮೯೩ರಲ್ಲಿ ಸ್ವಾಮೀಜಿ ಇವರ ಆಹ್ವಾನದ ಮೇರೆಗೆ ಇವರನ್ನು ಪ್ರಯೋಗಶಾಲೆಯಲ್ಲಿ ಸಂಧಿಸಿದ್ದರು.

ಟೆಸ್ಲಾರವರು, ಲೆಕ್ಕಾಚಾರ ಪೂರ್ವಕವಾಗಿ ಬಲ (*Force*) ಮತ್ತು ಭೌತದ್ರವ್ಯ (*Matter*) ಗಳು ಹೇಗೆ ರೂಪಾಂತರಗೊಂಡು ಸಂಭವನೀಯ ಚೈತನ್ಯಗಳಾಗಬಲ್ಲವೆಂಬುದನ್ನು ತಾನು ಪ್ರತಿಪಾದಿಸಬಲ್ಲೆ ಎಂದು ಹೇಳುತ್ತಿದ್ದರು. ಸ್ವಾಮೀಜಿಯವರ ಅಭಿಪ್ರಾಯದ ಪ್ರಕಾರ ವೇದಾಂತದ ಸೃಷ್ಟಿತತ್ತ್ವಶಾಸ್ತ್ರ (*Cosmology*) ಮತ್ತು ಅಂತಿಮಗತಿ ಶಾಸ್ತ್ರ (*Eschatology*)ಗಳು ಆಧುನಿಕ ವಿಜ್ಞಾನದೊಂದಿಗೆ ಸಾಮರಸ್ಯಗೊಳ್ಳುತ್ತವೆ.

ಸ್ವಾಮೀಜಿ ಅಮೆರಿಕಾಕ್ಕೆ ಬರುವ ೧೫ ವರ್ಷಗಳ ಹಿಂದೆ ಸ್ಥಾಪಿತವಾದ "ಬಲೂನ್ ಸೊಸೈಟಿ" (Balloon Society)ಯ ವಿಶೇಷವೇನೆಂದರೆ ಅದು ಆಕಾಶಯಾನ, ರಸಾಯನಶಾಸ್ತ್ರ, ಉಲ್ಕಾಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಪರಿಣತಿಗಳಿಸಿದ ಸದಸ್ಯರಿಂದ ಕೂಡಿದ ಒಂದು ಪ್ರತಿಷ್ಠಿತ ಸಂಸ್ಥೆಯಾಗಿತ್ತು. ಇದರ ಸದಸ್ಯರ ಒಂದು ಗುರಿಯೇನೆಂದರೆ ವೈಮಾನಿಕ ಶಾಸ್ತ್ರದ ಅಧ್ಯಯನ, ಆಕಾಶಯಾನಮಾಡುವಾಗ ದಾಖಲಿಸಿದ ವೈಜ್ಞಾನಿಕ ಅವಲೋಕನಗಳನ್ನು ಕುರಿತು ಚಿಂತಿಸುವುದು. ಇಂತಹ ಉನ್ನತ ವಿಜ್ಞಾನಿಗಳ ಸಭೆಯಲ್ಲಿ ಅವರ ಭಾವನೆಗಳಿಗೆ ಸ್ಪಂದಿಸಿ, ಸ್ವಾಮೀಜಿ ಹೇಗೆ ಮಾತನಾಡಿದರೆಂಬುದೇ ಆಶ್ಚರ್ಯಕರವಾದುದು.

ವಿವೇಕಾನಂದರಿಗೆ ಭೌತಶಾಸ್ತ್ರದ ಮೇಲಿದ್ದ ಪ್ರಭುತ್ವ ಅತ್ಯದ್ಭುತವಾದುದು. ಮುಂದೆ ಬೆಳಕಿಗೆ ಬರುವ ವೈಜ್ಞಾನಿಕ ಸಿದ್ಧಾಂತಗಳ ಪ್ರಸ್ತಾಪ ಅವರ ಉಪನ್ಯಾಸಗಳಲ್ಲಿ ದೊರೆಯುತ್ತವೆ.

ಪ್ರಖ್ಯಾತವಾದ "ನ್ಯೂಯಾರ್ಕ್ ಮೆಡಿಕಲ್ ಟಾಯಮ್ಸ್" ಎಂಬ ಮಾಸಪತ್ರಿಕೆಗಾಗಿ ಆಕಾಶ ತತ್ವ(Ether)ದ ಬಗ್ಗೆ ಒಂದು ವಿದ್ವತ್ ಪೂರ್ಣವಾದ ಲೇಖನವನ್ನು ಅವರು ಬರೆದರು. ಅದರ ಸಂಸ್ಥಾಪಕರು ಹಾಗೂ ಸಂಪಾದಕರು ಡಾ.ಎಗ್‌ಬರ್ಟ್ ಗ್ರುನ್ಸೆ (*Dr. Egbert Grunsay*). ಸ್ವಾಮೀಜಿಯವರ ಲೇಖನ ಫೆಬ್ರವರಿ ೧೮೯೫ರಲ್ಲಿ ಪ್ರಕಟವಾಯಿತು. ಪಾಶ್ಚಾತ್ಯ ವಿಜ್ಞಾನ ಮತ್ತು ಪೌರಸ್ತ್ಯ ಚಿಂತನೆಗಳ ಸಾಮರಸ್ಯವನ್ನು ಮತ್ತು ತದನಂತರದಲ್ಲಿ ಅವುಗಳು ಯಾವ ರೀತಿಯಲ್ಲಿ ಜೊತೆಗೂಡುತ್ತವೆ ಎಂಬುದನ್ನು ಲೇಖನದಲ್ಲಿ ವಿವರಿಸಿದ್ದರು. ಆದರೆ ಕೆಲವು ವೈಜ್ಞಾನಿಕ ತತ್ತ್ವಗಳು ಇತ್ತೀಚಿನ ಸಂಶೋಧನೆಗಳಿಂದ ಮಾರ್ಪಾಡಾಗಿವೆ. ನಿಜಕ್ಕೂ ಆಕಾಶತತ್ವ (*Ether*)ವೆಂಬ ಕಲ್ಪನೆಯೇ ವಿಜ್ಞಾನಿಗಳ ದೃಷ್ಟಿಯಲ್ಲಿ ವಿವಾದಾಸ್ಪದ ವಿಷಯವಾಗಿದ್ದು ಕಳೆದ ಶತಮಾನದ (೧೯೦೦ ರ) ಆದಿಯಲ್ಲಿ ತಿರಸ್ಕರಿಸಲ್ಪಟ್ಟಿತು. ಜೋಹಾನ್ ಜೋಲ್ನಾರ್ (*Johann Zollner*) ಮುಂತಾದ ವಿಜ್ಞಾನಿಗಳ ಕೆಲಸದ ಚಿಂತನ-ಮಂಥನಗಳನ್ನು ಸ್ವಾಮೀಜಿ ತಮ್ಮ ಲೇಖನದಲ್ಲಿ ಪ್ರತಿಪಾದಿಸಿದ್ದರು.



ಡಾ.ಎಗ್‌ಬರ್ಟ್ ಗ್ರುನ್ಸೆ

ಆದರೆ ಇತ್ತೀಚಿನ ದಿನಗಳಲ್ಲಿ ಆಕಾಶ ತತ್ವಕ್ಕೆ (*Ether*) ಹೊಸ ಚಾಲನೆ ದೊರೆತಿದೆ. ಅದರ ಬಗ್ಗೆ ಸಂಕ್ಷಿಪ್ತ ವಿವರಣೆ ಕೊಡಬಹುದು. ಆಕಾಶವೆಂದರೆ ಸತತವಾಗಿ ತನ್ನ ಸುತ್ತಲೂ ತಿರುಗುತ್ತಾ ಹಾಗೂ ಎಲ್ಲೆಡೆಯಲ್ಲಿ ತೀವ್ರ ರಭಸದಿಂದ ಚಲಿಸುತ್ತಿರುವ ಸೂಕ್ಷ್ಮಾತಿ ಸೂಕ್ಷ್ಮ ವಸ್ತು. ಯಾವುದೇ ಆಧುನಿಕ ಉಪಕರಣಗಳಿಂದ ಅದರ ಅಸ್ತಿತ್ವವನ್ನು ಕಂಡುಹಿಡಿಯಲು ಆಗಿಲ್ಲ. ಆದರೆ ಇದರ ಅಸ್ತಿತ್ವದ ಕಲ್ಪನೆಯಿಂದ, ಅಯಸ್ಕಾಂತ (*Magnetism*), ಗುರುತ್ವಾಕರ್ಷಣ (*Gravitation*) ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಹೊಸ ಶೋಧನೆಗಳಿಗೆ, ಈ ಹಿಂದೆ ನಿಖರವಾಗಿ ವಿವರಿಸಲಾಗದಂತಹ ವಿಷಯಗಳಿಗೆ, ನಿಖರವಾದ ವಿವರಗಳು ದೊರೆಯುತ್ತಲಿವೆ. (*Indian Express : Science Express* ,ಅಸಗರ್ ಹುಸೇನರ ಲೇಖನ, 10/2000).

ಈ ರೀತಿ ಸಹಜ ಕುತೂಹಲಿಗಳಾದ ಸ್ವಾಮೀಜಿ ಅಮೆರಿಕಾದಲ್ಲಿನ ಸಮಕಾಲೀನ ವಿಜ್ಞಾನಿಗಳನ್ನು ಭೇಟಿಮಾಡಿ, ಚರ್ಚಿಸಿ ಮತ್ತು ತಮ್ಮ ಪ್ರಚಂಡ ಉಪನ್ಯಾಸಗಳಿಂದ ಅವರನ್ನು ಚಕಿತಗೊಳಿಸಿ, ವೇದಾಂತ ತತ್ತ್ವಗಳು ಹಾಗೂ ಆಧುನಿಕ ವಿಜ್ಞಾನ ಒಂದಕ್ಕೊಂದು ಹೇಗೆ ಪೂರಕವಾಗಿವೆ ಎಂಬುದನ್ನು ಅನೇಕ ವಿಜ್ಞಾನಿಗಳಿಗೆ ಹಾಗು ಚಿಂತನಕಾರರಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಯಶಸ್ವಿಯಾಗಿದ್ದರು. ❑